ಆರ್‌ಬಿಐ / 2005–06 / 153
ಆರ್‌ಪಿಸಿಡಿ . ಪಿಎಲ್‌ಎನ್‌ಎಫ್‌ಎಸ್.ಬಿಸಿ. ಸಂಖ್ಯೆ .39 / 06.02.31 / 2005–06
ಸೆಪ್ಟೆಂಬರ್ 3, 2005

ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು
ಎಲ್ಲಾ ಸಾರ್ವಜನಿಕ ವಲಯ ಬ್ಯಾಂಕುಗಳು

ಮಾನ್ಯರೆ

**ಎಸ್‌ಎಂಇ ಖಾತೆಗಳಿಗೆ ಸಂಬಂಧಿಸಿದ ಒಂದು ಬಾರಿಗೆ ಚುಕ್ತಾ ಯೋಜನೆ ಕುರಿತ ಮಾರ್ಗಸೂಚಿಗಳು**

ದಿನಾಂಕ ಆಗಸ್ಟ್ 19, 2005 ರ ನಮ್ಮ ಸುತ್ತೋಲೆ ಆರ್‌ಪಿಸಿಡಿ .ಪಿಎಲ್‌ಎನ್‌ಎಫ್‌ಎಸ್.ಬಿಸಿ .ಸಂಖ್ಯೆ. 31 /06.02.31/ 2005–06 ರ ಪ್ಯಾರಾ ಸಂಖ್ಯೆ 8ನ್ನು ದಯವಿಟ್ಟು ನೋಡಿ. ಅದರಂತೆ 10 ಕೋಟಿ ರೂಪಾಯಿಗಳಿಗಿಂತ ಕಡಿಮೆ ಮೊತ್ತದ ಅನುತ್ಪಾದಕ ಆಸ್ತಿ (ಎನ್‌ಪಿಎ)ಗಳ ವಸೂಲಿಗೆ ಒಂದು ಬಾರಿಗೆ ಚುಕ್ತಾ ಯೋಜನೆಯನ್ನು ಈ ಕೆಳಗೆ ಪ್ರಸ್ತಾವಿಸಲಾಗಿದೆ. ಈ ಯೋಜನೆಯನ್ನು ಎಲ್ಲ ಸಾರ್ವಜನಿಕ ವಲಯ ಬ್ಯಾಂಕುಗಳು ಅನುಷ್ಠಾನಗೊಳಿಸಬೇಕಾಗಿದೆ. ಈ ಮಾರ್ಗಸೂಚಿಗಳು ಎಸ್‌ಎಂಇ ವಲಯದಲ್ಲಿನ ದೀರ್ಘಕಾಲದಿಂದ ಬಾಕಿ ಇರುವ ಎನ್‌ಪಿಎ ಗಳನ್ನು ಒಂದು ಬಾರಿಗೆ ಚುಕ್ತಾ ಮಾಡುವುದಕ್ಕೆ ಒಂದು ಸರಳೀಕರಿಸಿದ, ವಿವೇಚನೆಗೆ ಅವಕಾಶವಿಲ್ಲದ ಮತ್ತು ಪಕ್ಷಪಾತವಿಲ್ಲದ ವ್ಯವಸ್ಥೆಯನ್ನು ಒದಗಿಸುತ್ತವೆ. ಎಲ್ಲ ಸಾರ್ವಜನಿಕ ಬ್ಯಾಂಕುಗಳು ಈ ಮಾರ್ಗ ಸೂಚಿಗಳನ್ನು ಏಕ ಪ್ರಕಾರವಾಗಿ ಅನುಷ್ಠಾನಗೊಳಿಸತಕ್ಕದ್ದು.

2. ಆದರೆ, ಈ ಮಾರ್ಗಸೂಚಿಗಳು ಉದ್ದೇಶಪೂರ್ವಕವಾಗಿ ಸಾಲ ಪಾವತಿಸದೆ ತಪ್ಪುವ, ವಂಚನೆಯ ಮತ್ತು ದುಷ್ಕೃತ್ಯದ ಪ್ರಕರಣಗಳಿಗೆ ಅನ್ವಯಿಸುವುದಿಲ್ಲ. ಬ್ಯಾಂಕುಗಳು ಉದ್ದೇಶಪೂರ್ವಕವಾಗಿ ಸಾಲ ಪಾವತಿಸದೆ ತಪ್ಪುವ, ವಂಚನೆಯ ಮತ್ತು ದುಷ್ಕೃತ್ಯದ ಪ್ರಕರಣಗಳನ್ನು ಗುರುತಿಸಿ ಕೂಡಲೇ ಕ್ರಮ ಕೈಗೊಳ್ಳಬೇಕು. ಅದರಂತೆ ಎಸ್‌ಎಂಇ ವಲಯದಲ್ಲಿ ಸಾರ್ವಜನಿಕ ವಲಯ ಬ್ಯಾಂಕುಗಳ ಎನ್‌ಪಿಎಗಳಿಗೆ ಸಂಬಂದಿಸಿದ ಬಾಕಿಯನ್ನು ಒಂದು ಬಾರಿಗೆ ಚುಕ್ತಾ ಮಾಡುವುದಕ್ಕೆ ಸಂಬಂಧಿಸಿದ ಮಾರ್ಗದರ್ಶಿ ಸೂಚಿಗಳನ್ನು ಕೆಳಗೆ ಕೊಡಲಾಗಿದೆ.

**(ಎ) 10 ಕೋಟಿ ರೂಪಾಯಿಗಳವರೆಗಿನ ದೀರ್ಘಕಾಲದಿಂದ ಬಾಕಿ ಇರುವ ಎನ್‌ಪಿಎ ಗಳನ್ನು ಒಂದು ಬಾರಿಗೆ ಚುಕ್ತಾ ಮಾಡುವುದಕ್ಕೆ ಸಂಬಂಧಿಸಿದ ಮಾರ್ಗ ಸೂಚಿಗಳು**

**(i) ವ್ಯಾಪ್ತಿ**

(ಎ) ಪರಿಷ್ಕೃತ ಮಾರ್ಗಸೂಚಿಗಳು ಖಾತೆಯನ್ನು, ವಸೂಲಾಗುವುದು ಸಂದೇಹಾಸ್ಪದವೆಂದು ವರ್ಗೀಕರಿಸಿದ ದಿನಾಂಕದಂದು 10 ಕೋಟಿ ರೂಪಾಯಿ ಮತ್ತು ಕಡಿಮೆ ಪ್ರಮಾಣದ ಬಾಕಿ ಶಿಲ್ಕು ಇರುವಂಥ ಮಾರ್ಚ್ 31, 2004 ರಂದು ಇದ್ದಂತೆ ವಸೂಲಾಗುವುದು ಸಂದೇಹಾಸ್ಪದವಾಗಿರುವ ಅಥವಾ ನಷ್ಟವಾಗಿರುವ ಎಸ್‌ಎಂಇ ವಲಯದಲ್ಲಿನ ಎಲ್ಲ ಎನ್‌ಪಿಎ ಗಳಿಗೂ ಅನ್ವಯಿಸುತ್ತವೆ.

(ಬಿ) ಈ ಮಾರ್ಗಸೂಚಿಗಳು ಖಾತೆಯನ್ನು ವಸೂಲಾಗುವುದು ಸಂದೇಹಾಸ್ಪದವೆಂದು ವರ್ಗೀಕರಿಸಿದ ದಿನಾಂಕದಂದು 10 ಕೋಟಿ ರೂಪಾಯಿ ಮತ್ತು ಕಡಿಮೆ ಪ್ರಮಾಣದ ಬಾಕಿ ಶಿಲ್ಕು ಇರುವಂಥ

ಮಾರ್ಚ್ 31, 2004 ರಂದು ಇದ್ದಂತೆ ಕಡಿಮೆ ಮಟ್ಟದ್ದು ಎಂದು ವರ್ಗೀಕರಿಸಲಾಗಿರುವ, ಆ ತರುವಾಯ ವಸೂಲಾಗುವುದು ಸಂದೇಹಾಸ್ಪದವಾಗಿರುವ ಅಥವಾ ನಷ್ಟವಾಗಿರುವ ಎಲ್ಲ ಎನ್‌ಪಿಎ ಗಳಿಗೂ ಅನ್ವಯಿಸುತ್ತವೆ.

(ಸಿ) ಈ ಮಾರ್ಗಸೂಚಿಗಳು ಹಣಕಾಸು ಆಸ್ತಿಗಳಿಗೆ ಭದ್ರತೆಯೊದಗಿಸುವ ಮತ್ತು ಅವುಗಳನ್ನು ಪುನರ್ ನಿರ್ಮಾಣ ಮಾಡುವ ಹಾಗೂ ಭದ್ರತಾ ಹಿತಾಸಕ್ತಿಯನ್ನು ಅಮಲ್ಜಾರಿಗೊಳಿಸುವ ಕಾಯಿದೆ, 2002 ರ ಅಡಿಯಲ್ಲಿ ಬ್ಯಾಂಕುಗಳು ಕ್ರಮ ಪ್ರಾರಂಭಿಸಿರುವಂಥ ಪ್ರಕರಣಗಳಿಗೆ ಹಾಗೂ ನ್ಯಾಯಾಲಯಗಳು/ಡಿಆರ್‌ಟಿಗಳು/ ಬಿಐಎಫ್‌ಆರ್ ಇವುಗಳಿಂದ ಸಮ್ಮತಿ ಡಿಕ್ರಿ ಪಡೆಯುವುದಕ್ಕೆ ಒಳಪಟ್ಟು ನ್ಯಾಯಾಲಯಗಳಲ್ಲಿ / ಡಿಆರ್‌ಟಿ ಗಳಲ್ಲಿ / ಬಿಐಎಫ್‌ಆರ್ ನಲ್ಲಿ ಬಾಕಿ ಇರುವಂಥ ಪ್ರಕರಣಗಳಿಗೂ ಅನ್ವಯಿಸುತ್ತವೆ.

(ಡಿ)ಉದ್ದೇಶಪೂರ್ವಕವಾಗಿ ಸಾಲ ಪಾವತಿಸದೆ ತಪ್ಪೆಸಗುವ, ವಂಚನೆಯ ಮತ್ತು ದುಷ್ಕೃತ್ಯದ ಪ್ರಕರಣಗಳಿಗೆ ಅನ್ವಯಿಸುವುದಿಲ್ಲ.

(ಇ) ಸಾಲ ಪಡೆದವರಿಂದ ಅರ್ಜಿಗಳನ್ನು ಸ್ವೀಕರಿಸುವುದಕ್ಕೆ ಕೊನೆಯ ದಿನ ಮಾರ್ಚ್ 31, 2006 ರಂದು ವ್ಯವಹಾರ ಮುಕ್ತಾಯವಾಗುವ ಸಮಯ. ಪರಿಷ್ಕೃತ ಮಾರ್ಗಸೂಚಿಗಳ ಮೇರೆಗೆ ಅರ್ಜಿಗಳ ಪರಿಶೀಲನೆಯನ್ನು ಜೂನ್ 30, 2006 ರ ವೇಳೆಗೆ ಪೂರ್ಣಗೊಳಿಸತಕ್ಕದ್ದು.

**(೨) ಸಾಲ ಚುಕ್ತಾ ಸೂತ್ರ – ಮೊಬಲಗು:**

(ಎ) **ಮಾರ್ಚ್ 31, 2004 ರಂದು ಇದ್ದಂತೆ ವಸೂಲಾಗುವುದು ಸಂದೇಹಾಸ್ಪದ ಅಥವಾ ನಷ್ಟವಾದವುಗಳು ಎಂದು ವರ್ಗೀಕರಿಸಲಾದ ಎನ್‌ಪಿಎ ಗಳು**

ಮಾರ್ಚ್ 31 , 2004 ರಂದು ಇದ್ದಂತೆ ವಸೂಲಾಗುವುದು ಸಂದೇಹಾಸ್ಪದವಾದವುಗಳು ಅಥವಾ ನಷ್ಟವಾದವುಗಳು ಎಂದು ವರ್ಗೀಕರಿಸಲಾದ ಎನ್‌ಪಿಎ ಗಳನ್ನು ಒಂದು ಬಾರಿಗೆ ಚುಕ್ತಾ ಮಾಡುವ ಸಂಬಂಧದಲ್ಲಿ ಪರಿಷ್ಕೃತ ಮಾರ್ಗಸೂಚಿಗಳ ಮೇರೆಗೆ ವಸೂಲಿ ಮಾಡತಕ್ಕ ಕನಿಷ್ಠ ಮೊಬಲಗು ಖಾತೆಯನ್ನು ವಸೂಲಾಗುವುದು ಸಂದೇಹಾಸ್ಪದವಾದ ಎನ್‌ಪಿಎಗಳೆಂದು ವರ್ಗೀಕರಿಸಲಾದ ದಿನಾಂಕದಂದು ಖಾತೆಯಲ್ಲಿ ಬಾಕಿ ಉಳಿದಿದ್ದ ಶಿಲ್ಕಿನ ಶೇ 100 ರಷ್ಟು.

**(ಬಿ) ಮಾರ್ಚ್ 31 , 2004 ರಂದು ಇದ್ದಂತೆ ಕಡಿಮೆಮಟ್ಟದ್ದು ಎಂದು ವರ್ಗೀಕರಿಸಲಾಗಿದ್ದ, ಅನಂತರ ವಸೂಲಾಗುವುದು ಸಂದೇಹಾಸ್ಪದವಾಗಿ ಅಥವಾ ನಷ್ಟವಾಗಿ ಪರಿಣಮಿಸಿದ ಎನ್ ಪಿ ಎ ಗಳು**

ಮಾರ್ಚ್ 31 , 2004 ರಂದು ಇದ್ದಂತೆ ಕಡಿಮೆ ಮಟ್ಟದ್ದು ಎಂದು ವರ್ಗೀಕರಿಸಲಾಗಿದ್ದ, ಅನಂತರ ವಸೂಲಾಗುವುದು ಸಂದೇಹಾಸ್ಪದವಾಗಿ ಅಥವಾ ನಷ್ಟವಾಗಿ ಪರಿಣಮಿಸಿದ ಎನ್‌ಪಿಎ ಗಳ ಸಂಬಂಧದಲ್ಲಿ ವಸೂಲಿ ಮಾಡತಕ್ಕ ಕನಿಷ್ಠ ಮೊಬಲಗು ಖಾತೆಯನ್ನು ವಸೂಲಾಗುವುದು ಸಂದೇಹಾಸ್ಪದವಾದ ಎನ್‌ಪಿಎ ಗಳೆಂದು ವರ್ಗೀಕರಿಸಲಾದ ದಿನಾಂಕದಂದು ಖಾತೆಯಲ್ಲಿ ಬಾಕಿ ಉಳಿದಿದ್ದ ಶಿಲ್ಕಿನ ಶೇ 100 ರಷ್ಟು ಮತ್ತು ಏಪ್ರಿಲ್ 1, 2004 ರಿಂದ ಅಂತಿಮ ಸಂದಾಯದವರೆಗೆ ಪ್ರಸಕ್ತ ಜಾರಿಯಲ್ಲಿರುವ ಪ್ರದಾನ ಬಡ್ಡಿ ದರದಲ್ಲಿ ಬಡ್ಡಿ.

**(೩) ಸಂದಾಯ:**

ಮೇಲಿನ ಎರಡೂ ಪ್ರಕರಣಗಳಲ್ಲಿ ಲೆಕ್ಕ ಹಾಕಲಾದ ಪಾವತಿಸಬೇಕಾದ ಮೊಬಲಗನ್ನು, ಸಾದ್ಯವಾದ ಮಟ್ಟಿಗೆ ಇಡಿಗಂಟಿನಲ್ಲಿ ಪಾವತಿ ಮಾಡತಕ್ಕದ್ದು. ಪೂರಾ ಹಣವನ್ನು ಇಡೀಗಂಟಿನಲ್ಲಿ ಪಾವತಿಸಲು ಸಾಲ ಪಡೆದವರಿಗೆ ಸಾಧ್ಯವಿರದ ಪ್ರಕರಣಗಳಲ್ಲಿ ಪಾವತಿಸಬೇಕಾದ ಹಣದ ಕೊನೆಯ ಪಕ್ಷ ಶೇ 25

ರಷ್ಟನ್ನು ಆಗಲೇ (ಅಪ್ ಫ್ರಂಟ್ ಆಗಿ) ಪಾವತಿಸತಕ್ಕದ್ದು ಮತ್ತು ಉಳಿದ ಶೇ 75 ರಷ್ಟು ಹಣವನ್ನು ಇತ್ಯರ್ಥದ ದಿನಾಂಕದಿಂದ ಅಂತಿಮ ಸಂದಾಯದ ದಿನಾಂಕದವರೆಗೆ ಪ್ರಸ್ತುತ ಜಾರಿಯಲ್ಲಿರುವ ಪ್ರಧಾನ ಬಡ್ಡಿ ದರದಲ್ಲಿ ಬಡ್ಡಿ ಸಹಿತ ಒಂದು ವರ್ಷದ ಅವಧಿಯೊಳಗೆ ಕಂತುಗಳಲ್ಲಿ ವಸೂಲಿ ಮಾಡತಕ್ಕದ್ದು.

**(ಋ) ಮಂಜೂರಾತಿ ಪ್ರಾಧಿಕಾರಿ:**

ಒಂದೇ ಬಾರಿಗೆ ಚುಕ್ತಾ ಮಾಡುವ ಕುರಿತ ನಿರ್ಣಯವನ್ನು ಮತ್ತು ಅದರ ಪರಿಣಾಮವಾಗಿ ಮನ್ನಾ ಅಥವಾ ಮಾಫಿ ಅಥವಾ ವಜಾ ಮಾಡುವುದಕ್ಕೆ ಮಂಜೂರಾತಿ ನೀಡುವ ನಿರ್ಣಯವನ್ನು ನಿಯೋಜಿತ ಅಧಿಕಾರಗಳನ್ನು ಹೊಂದಿರುವ ಸಕ್ಷಮ ಪ್ರಾಧಿಕಾರಿ ತೆಗೆದುಕೊಳ್ಳತಕ್ಕದ್ದು.

**(ತ) ವಿವೇಚನೆಗೆ ಎಡೆಯಿಲ್ಲದ ಪರಿಗಣನೆ:**

ಯೋಜನೆಗೆ ಒಳಪಟ್ಟಿರುವ ಎಲ್ಲ ಎನ್‌ಪಿಎ ಗಳನ್ನು ಒಂದೇ ಬಾರಿಗೆ ಚುಕ್ತಾ ಮಾಡುವುದಕ್ಕೆ ಸಂಬಂಧಿಸಿದ ಮೇಲ್ಕಂಡ ಮಾರ್ಗಸೂಚಿಗಳನ್ನು ಬ್ಯಾಂಕುಗಳು ಯಾವುದೇ ತಾರತಮ್ಯ ತೋರದೆ ಪಾಲಿಸತಕ್ಕದ್ದು ಮತ್ತು ಪ್ರಗತಿಯ ಕುರಿತು ಮತ್ತು ಇತ್ಯರ್ಥದ ವಿವರಗಳ ಕುರಿತ ಮಾಸಿಕ ವರದಿಯನ್ನು ಸಂಬಂಧಪಟ್ಟ ಪ್ರಾಧಿಕಾರಿಯು ತನ್ನ ತಕ್ಷಣದ ಮೇಲಧಿಕಾರಿಗೆ ಮತ್ತು ತಮ್ಮ ಕೇಂದ್ರ ಕಚೇರಿಗೆ ಸಲ್ಲಿಸತಕ್ಕದ್ದು. ಬ್ಯಾಂಕುಗಳು ಈ ಬಗ್ಗೆ ವ್ಯಾಪಕ ಪ್ರಚಾರ ನೀಡತಕ್ಕದ್ದು ಹಾಗೂ ಈ ಮಾರ್ಗಸೂಚಿಗಳ ಅನ್ವಯ ದೀರ್ಘಕಾಲದಿಂದ ಉಳಿದಿರುವ ತಮ್ಮ ಬಾಕಿಗಳನ್ನು ಒಂದೇ ಬಾರಿಗೆ ಚುಕ್ತಾ ಮಾಡುವುದಕ್ಕೆ ಈ ಅವಕಾಶವನ್ನು ಬಳಸಿಕೊಳ್ಳಲು ಅರ್ಹ ಸುಸ್ತಿದಾರ ಸಾಲಗಾರರಿಗೆ ಜನವರಿ 31, 2006 ರ ವೇಳೆಗೆ ನೋಟೀಸು ನೀಡತಕ್ಕದ್ದು. ವಿವಿಧ ಮಾಧ್ಯಮಗಳ ಮುಖಾಂತರ ಈ ಮಾರ್ಗಸೂಚಿಗಳಿಗೆ ಸಾಕಷ್ಟು ಪ್ರಚಾರ ಸಿಗುವಂತೆ ನೋಡಿಕೊಳ್ಳತಕ್ಕದ್ದು.

**(ತ) ಮಂಡಳಿಗೆ ವರದಿ ಮಾಡುವುದು:**

ದೀರ್ಘಕಾಲದಿಂದ ಬಾಕಿ ಇರುವ ಎನ್‌ಪಿಎ ಗಳನ್ನು ಪರಿಷ್ಕೃತ ಮಾರ್ಗಸೂಚಿಗಳ ಮೇರೆಗೆ ಒಂದೇ ಬಾರಿಗೆ ಚುಕ್ತಾ ಮಾಡುವ ಪ್ರಕ್ರಿಯೆಯಲ್ಲಿ ಆಗಿರುವ ಪ್ರಗತಿಯ ಬಗ್ಗೆ ಬ್ಯಾಂಕುಗಳು ಪ್ರತಿ ಮೂರು ತಿಂಗಳಿಗೊಮ್ಮೆ ನಿರ್ದೇಶಕರ ಮಂಡಳಿಗೆ ವರದಿಯನ್ನು ಸಲ್ಲಿಸತಕ್ಕದ್ದು. ತ್ರೈಮಾಸಿಕ ಪ್ರಗತಿ ವರದಿಯನ್ನು ನಮಗೂ ಕೂಡ ಕಳುಹಿಸಿಕೊಡತಕ್ಕದ್ದು.

3. ಮೇಲಿನ ಮಾರ್ಗಸೂಚಿಗಳನ್ನು ಕೂಡಲೇ ಅನುಷ್ಠಾನಗೊಳಿಸುವುದಕ್ಕಾಗಿ ನಿಮ್ಮ ನಿಯಂತ್ರಣದಲ್ಲಿರುವ ಕಚೇರಿಗಳಿಗೆ ಮತ್ತು ಶಾಖೆಗಳಿಗೆ ದಯವಿಟ್ಟು ಸಲಹೆ ಮಾಡತಕ್ಕದ್ದು. ಈ ಮಾಗಸೂಚಿಗಳನ್ನು ನಿಮ್ಮ ಬ್ಯಾಂಕಿನ ವೆಬ್‌ಸೈಟಿನಲ್ಲಿ ಪ್ರದರ್ಶಿಸತಕ್ಕದ್ದು.

4.ಮೇಲಿನ ಚುಕ್ತಾಗೆ ಸಂಬಂಧಿಸಿದ ಮಾರ್ಗಸೂಚಿಗಳಿಂದ ಯಾರೇ ಸಾಲಗಾರನಿಗೆ ಅನ್ವಯಿಸಿದಂತೆ ಯಾವುದೇ ರೀತಿಯ ಮಾರ್ಗಪಲ್ಲಟವನ್ನು ನಿರ್ದೇಶಕರ ಮಂಡಲಿ ಮಾತ್ರವೇ ಮಾಡತಕ್ಕದ್ದು.

5. ದಯವಿಟ್ಟು ಸ್ವೀಕೃತಿ ನೀಡಿ.

**ತಮ್ಮ ವಿಶ್ವಾಸಿ,**

**( ಜಿ. ಶ್ರೀನಿವಾಸನ್)**

**ಮುಖ್ಯ ಪ್ರಧಾನ ವ್ಯವಸ್ಥಾಪಕರು**